## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.58/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರಾಘವೇಂದ್ರ | CW: 3 | PW: 3 |
| ತಂದೆಯ ಹೆಸರು | : | ಹಾಲೇಶಪ್ಪ | | |
| ವಯಸ್ಸು | : | 32 | | |
| ವೃತ್ತಿ | : | ಇಂಜಿನಿಯರ್ | | |
| ವಾಸಸ್ಥಳ | : | ಶಿವಮೊಗ್ಗ | | |

ದಿನಾಂಕಃ 04.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

1 ನೇ ಆರೋಪಿ ಗೊತ್ತು. 2 ಮತ್ತು 3 ನೇ ಆರೋಪಿಗಳು ಗೊತ್ತಿಲ್ಲ. ಚಾಸಾ 1 ನನ್ನ ದೊಡ್ಡಪ್ಪನ ಮಗ. ಚಾಸಾ 2 ಮತ್ತು 4 ರವರು ಗೊತ್ತು.

1 ನೇ ಆರೋಪಿಯು ಜಗಳ ಮಾಡುತ್ತಿದ್ದಾರೆ ಎಂದು ಚಾಸಾ 1 ರವರು ನನಗೆ ಪೋನ್ ಕರ ಮಾಡಿ ತಿಳಿಸಿದ್ದು ಅದರಂತೆ ನಾನು ಸ್ಥಳಕ್ಕೆ ಹೋಗಿ ನೋಡಿದಾಗ 1 ನೇ ಆರೋಪಿಯ ಜೊತೆ 3–4 ಜನ ಇದ್ದು, ಚಾಸಾ 1 ರವರು ಬಟ್ಟೆ ಹರಿದಿತ್ತು. 1 ನೇ ಆರೋಪಿಯು ಅಕ್ರಮವಾಗಿ ನಮ್ಮ ಜಮೀನಿನಲ್ಲಿ ಬೇಲಿ ಹಾಕಿದ್ದಾರೆ ಎಂದು ಗೊತ್ತಾಯಿತು. ಚಾಸಾ 1 ಮತ್ತು ನಾನು ಆಸ್ಪತ್ರೆಗೆ ಹೋಗಿ ನಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇವೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಆರೋಪಿಗಳು ಚಾಸಾ 1 ರವರು ಜಮೀನಿಗೆ ಹೊಗುತ್ತಿದ್ದಾಗ ಅವರನ್ನು ತಡೆದು ನಿಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಆರೋಪಿಯು ತಡೆದಿರುತ್ತಾನೆ ಉಳಿದ ಆರೋಪಿಗಳ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ನನಗೂ ಸಹ ಬೈದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳೆಲ್ಲರೂ ಕೈಕಾಲುಗಳಿಂದ ಚಾಸಾ 1 ರವರ ಮೈಕೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2 ಮತ್ತು 3 ನೇ ಆರೋಪಿಗಳು ಇರಲಿಲ್ಲ ಬೇರೆಯವರು ಇದ್ದರು ಎಂದು ನುಡಿಯುತ್ತಾರೆ. ನಾನು, ಚಾಸಾ 2 ಮತ್ತು 4 ರವರು ಅವರ ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. 2 ಮತ್ತು 3 ನೇ ಆರೋಪಿಗಳಿಗೆ ಸಹ ಚಾಸಾ 1 ರವರನ್ನು ತಡೆದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿ, ಹೊಡೆದು ಹಲ್ಲೆ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2-3 ನೇ ಆರೋಪಿಗಳು ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದರು ಎಂದು ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ-</u>

1 ನೇ ಆರೋಪಿ ಹಾಗೂ ಚಾಸಾ 1 ರವರ ನಡುವೆ ಜಮೀನಿನ ವಿಚಾರವಾಗಿ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಗಲಾಟೆ ಸಮಯದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ಪೋಲೀಸರು ಸೇರಿ ಸುಮಾರು 10 ಜನ ಇದ್ದರು ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ಗಲಾಟೆ ಮುಗಿದಿತ್ತಾ ಎಂದರೆ ಹೌದು. 1 ನೇ ಆರೋಪಿಯ ವಿರುದ್ದ ಸಿವಿಲ್ ವ್ಯಾಜ್ಯದ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.